ದಿನಾಂಕ 29/07/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

ಪಾಟೀಸವಾಲು :- ಶ್ರೀ ಬಿ.ಆರ್.ಡಿ ಪ್ರತಿವಾದಿ ಪರ ವಕೀಲರಿಂದ

1. ಪ್ರತಿವಾದಿ 2005 ರಲ್ಲಿ ಜಮೀನನ್ನು ಮಾರಾಟ ಮಾಡುತ್ತೇವೆ ಎಂದು ಹೇಳಿರುತ್ತಾರೆ. ನಂತರ 6 ತಿಂಗಳು ಕಳೆದ ನಂತರ ಮಾರಾಟದ ಬಗ್ಗೆ ಮಾತುಕತೆಯಾಗಿರುತ್ತದೆ. ಯಾವ ತಾರೀಖು ಮತ್ತು ವರ್ಷ ಬಂದು ಕೇಳಿರುತ್ತಾರೆ ಎಂದು ಹೇಳಲಾಗುವುದಿಲ್ಲ. ಮಾತುಕತೆ ಯಾಗುವ ಕಾಲಕ್ಕೆ ನರಸಮ್ಮ ಇವರು ಬಂದು ಮಾತುಕತೆ ಮಾಡಿರುತ್ತಾರೆ. ಮಾತುಕತೆಯಾಗುವ ಕಾಲಕ್ಕೆ ಪ್ರತಿವಾದಿ ಬಂದಿರುವುದಿಲ್ಲ ಆದರೆ ನಮ್ಮ ತಾಯಿ ಮಾತನಾಡಿರುವುದಕ್ಕೆ ನಾವು ಬದ್ಧ ಇರುತ್ತೇವೆ ಎಂದು ಹೇಳಿ ಹಣ ಪಡೆದುಕೊಂಡಿರುತ್ತಾರೆ. ಮಾತುಕತೆಯಾಗುವ ಕಾಲಕ್ಕೆ ಪ್ರತಿವಾದಿ ಬಂದಿರಲಿಲ್ಲ ಎಂದರೆ ಸರಿ. ಪ್ರತಿವಾದಿ 2005-06 ರಲ್ಲಿ ಬಂದಿರುತ್ತಾರೆ, ಆದರೆ ದಿನಾಂಕ ಗೊತ್ತಿರುವುದಿಲ್ಲ.

2. ಕ್ರಯದ ಖರಾರು ಪತ್ರವನ್ನು ಮಧುಗಿರಿ ತಾಲ್ಲೂಕು ಕಛೇರಿಯ ಬಳಿ ಆಗಿರುತ್ತದೆ. ದಿನಾಂಕಃ 04-03-2008 ರಂದು ಕ್ರಯದ ಕರಾರುಪತ್ರ ಆಗಿರುತ್ತದೆ. ಪತ್ರ ಬರೆಯುವ ಕಾಲಕ್ಕೆ ಗುಂಡೂರಾವ್, ಎ.ಜಿ.ನಾಗರಾಜು, ನಾವು, ಜಲಜಾಕ್ಷಿ, ಮತ್ತು ಎಂ.ಎಸ್ ಚಂದ್ರಪ್ಪ ಇವರುಗಳು ಹಾಜರಿದ್ದರು. ಕರಾರುಪತ್ರ ಬರೆಯುವ ಕಾಲಕ್ಕೆ ಮಾತುಕತೆಯಾಗಿರುವುದಿಲ್ಲ ಆದರೆ ಅದಕ್ಕೂ ಮೊದಲು ನರಸಮ್ಮ ಮನೆಯಲ್ಲಿ ಮಾತುಕತೆಯಾಗಿರುತ್ತದೆ. ಮಾತುಕತೆ ಯಾಗುವ ಕಾಲಕ್ಕೆ ನರಸಮ್ಮ, ಶ್ರೀನಿವಾಸ, ಸಿದ್ದಪ್ಪ ಇವರು ಹಾಜರಿದ್ದರು. ಆದರೆ ಸಿದ್ದಪ್ಪ ಇವರು ಮರಣಹೊಂದಿರುತ್ತಾರೆ.

3. ನರಸಮ್ಮ ಇವರಿಗೆ ಇಬ್ಬರು ಮಕ್ಕಳಿದ್ದು, ಅವರಲ್ಲಿ ಅವರ ಮಗ ತೀರಿಕೊಂಡಿರುತ್ತಾರೆ. ಅವರ ಮಗಳು ಪ್ರತಿವಾದಿ ಇರುತ್ತಾರೆ. ಪ್ರತಿವಾದಿಗೆ ಇಬ್ಬರು ಮಕ್ಕಳಿದ್ದು ಅವರು ಮಾತುಕತೆಯಾಗುವ ಕಾಲಕ್ಕೆ ಬಂದಿರಲಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಅಜ್ಜಿ ಏನು ಹೇಳುತ್ತಾರೊ ಅದಕ್ಕೆ ನಾವು ಬದ್ದರು ಎಂದು ಪ್ರತಿವಾದಿಯ ಮಕ್ಕಳು ಹೇಳಿರುತ್ತಾರೆಂದು ಉತ್ತರಿಸಿರುತ್ತಾರೆ.

4. ಕ್ರಯದ ಕರಾರುಪತ್ರ ಆಗುವ ಕಾಲಕ್ಕೆ 45,000/- ರೂ. ಮುಂಗಡ ಹಣ ಕೊಟ್ಟಿದ್ದು ಉಳಿದ 5,000/- ಹಣವನ್ನು ಕ್ರಯಪತ್ರ ಆಗುವ ಕಾಲಕ್ಕೆ ಕೊಡುವಂತೆ ಹೇಳಿರುತ್ತಾರೆ. ನಾನು 45,000/- ಹಣವನ್ನು ನಗದಾಗಿ ಕೊಟ್ಟಿರುತ್ತೇವೆ. ನಾವು ಸುಮಾರು 50 ಬಾರಿ ಕ್ರಯಪತ್ರ ಮಾಡಿಕೊಡುವಂತೆ ಪ್ರತಿವಾದಿಯನ್ನು ಕೇಳಿರುತ್ತೇನೆ. ನಮ್ಮ ವಕೀಲರ ಮುಖಾಂತರ ಲೀಗಲ್ ನೋಟಿಸ್ ಕಳುಹಿಸಿದ್ದು ಅದರಲ್ಲಿ ನಾನು 5,00,000/- ರೂ. ಹಣವನ್ನು ನಿಮಗೆ ಕೊಟ್ಟು ನೊಂದಣಿ ಕ್ರಯಪತ್ರ ಬರೆಸಿಕೊಳ್ಳಲು ಸಿದ್ದನಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನು ಯಾವ ದಿನಾಂಕದಂದು ನಮ್ಮ ವಕೀಲರ ಮುಖಾಂತರ ನೋಟಿಸ್ ಕಳುಹಿಸಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಕಳುಹಿಸಿದ ಲೀಗಲ್ ನೋಟಿಸ್ ನಲ್ಲಿ ಏನೇನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ನೋಟಿಸ್ ನಲ್ಲಿ ಬರೆದ ವಿಚಾರಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಎ.ಸಿ.ನಾಗರಾಜು ಇವರಿಗೆ ಪ್ರತಿವಾದಿ ಮಾರಾಟ ಮಾಡುವ ಬಗ್ಗೆ ಹಾಗೂ ದಾವಾಸ್ತಿಯಲ್ಲಿ 8 ಗುಂಟೆಯಲ್ಲಿ ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ಸದರಿ 8 ಗುಂಟೆ ಜಮೀನನ್ನು ಕ್ರಯದ ಕರಾರು ಪತ್ರ ಆಗುವುದಕ್ಕಿಂತ ಮುಂಚೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನಮಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟ ನಂತರ ಮಾರಾಟ ಮಾಡಿರುತ್ತಾರೆಂದು ಉತ್ತರಿಸಿರುತ್ತಾರೆ. ನನಗೆ ಸರ್ವೆ ನಂ- 9/1 ಡಿ1 ಆಸ್ತಿಯ ಕರಾರುಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಸರ್ವೆ ನಂಬರ್ ನಲ್ಲಿ 24 ಗುಂಟೆ ಆಸ್ತಿ ಇರುತ್ತದೆ. ದಾವಾಸ್ತಿ ಪ್ರತಿವಾದಿಗೆ ಯಾವಾ ರೀತಿ ಬಂದಿರುತ್ತದೆ ಎಂದು ನಾನು ವಿಚಾರ ಮಾಡಿರುತ್ತೇನೆ. ದಾವಾಸ್ತಿ ಪ್ರತಿವಾದಿಗೆ ಪಿತ್ರಾರ್ಜಿತ ಆಸ್ತಿ ಇರುತ್ತದೆ. ದಾವಾಸ್ತಿ ಪ್ರತಿವಾದಿಗೆ ಅವರ ತಾಯಿ ವಿಲ್ ಮುಖಾಂತರ ಕೊಟ್ಟಿರುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

ಸಹಿ/-

( ರಘುನಾಥ ಗೌಡ ಕೆ.ಟಿ. )

ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ.